**RR + PR**

**ಸಂಕೇತ ಸಂಖ್ಯೆ : 33-K** **ವಿಷಯ : ದ್ವಿತೀಯ ಭಾಷೆ — ಕನ್ನಡ**

**Code No. : 33-K Subject : Second Language — KANNADA**

**(ಹಳೆ ಪಠ್ಯಕ್ರಮ / Old Syllabus)**

**(ಪುನರಾವರ್ತಿತ ಅಭ್ಯರ್ಥಿ + ಪುನರಾವರ್ತಿತ ಖಾಸಗಿ ಅಭ್ಯರ್ಥಿ / Regular Repeater + Private Repeater)**

***ಸಾಮಾನ್ಯ ಸೂಚನೆಗಳು :***

i) ಈ ಪ್ರಶ್ನೋತ್ತರ ಕಿರುಪುಸ್ತಕವು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 54 ಪ್ರಶ್ನೆಗಳನ್ನು ಹೊಂದಿದೆ.

ii) ಪ್ರತಿಯೊಂದು ವಸ್ತುನಿಷ್ಠ ಮಾದರಿ ಪ್ರಶ್ನೆಯ ಉತ್ತರಕ್ಕಾಗಿ ಜಾಗವನ್ನು ನೀಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ, ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

iii) ವಿಷಯನಿಷ್ಠ ಮಾದರಿ ಪ್ರಶ್ನೆಗಳ ಉತ್ತಂಗಳಿಗೆ ಸಾಕಷ್ಟು ಜಾಗವನ್ನು ನೀಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

iv) ವಸ್ತುನಿಷ್ಠ ಮಾದರಿ ಮತ್ತು ವಿಷಯನಿಷ್ಠ ಮಾದರಿ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಅನುಸರಿಸಿ.

v) ವಿದ್ಯಾರ್ಥಿಗಳು ಸೀಸದ ಕಡ್ಡಿ (ಪೆನ್ಸಿಲ್) ಯಿಂದ ಉತ್ತರಗಳನ್ನು ಬರೆಯಬಾರದು. ಪೆನ್ಸಿಲ್‌ನಿಂದ ಉತ್ತರ ಬರೆದಲ್ಲಿ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ. (ನಕ್ಷೆಗಳು, ರೇಖಾಚಿತ್ರಗಳು ಮತ್ತು ಭೂಪಟಗಳನ್ನು ಬಿಟ್ಟು).

vi) ಬಹು–ಆಯ್ಕೆ, ಖಾಲಿ ಸ್ಥಳಗಳನ್ನು ಭರ್ತಿ ಮಾಡುವುದು, ಹೊಂದಿಸಿ ಬರೆಯುವ ಪ್ರಶ್ನೆಗಳ ವಿಷಯದಲ್ಲಿ ಕೆರೆದು ಅಳಿಸುವುದು / ತಿದ್ದಿ ಬರೆಯುವುದು / ಗುರುತಿಸುವುದು ಮಾಡಿದಲ್ಲಿ ಮೌಲ್ಯಮಾಪನಕ್ಕೆ ಅನರ್ಹವಾಗುತ್ತದೆ.

vii) ಪ್ರಶ್ನೆ ಪತ್ರಿಕೆಯನ್ನು ಓದಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

viii) ನಿಮ್ಮ ಪ್ರಶ್ನೋತ್ತರ ಕಿರುಪುಸ್ತಕದ ಬಲಭಾಗದಲ್ಲಿರುವ ಗೆರೆಯ ಪಕ್ಕದ ಖಾಲಿ ಜಾಗದಲ್ಲಿ ಯಾವುದೇ ರೀತಿಯ ಬರಹಗಳನ್ನು ಬರೆಯಬಾರದು.

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ : $15 \times 1 = 15$

1. 'ಮೂಡಣ' ಪದದ ಸಮಾನಾರ್ಥಕ ಪದ

   (ಎ) ಪೂರ್ವ (ಬಿ) ಪಶ್ಚಿಮ

   (ಸಿ) ಉತ್ತರ (ಡಿ) ದಕ್ಷಿಣ

2. 'ಆಗಮನ' ಪದದ ವಿರುದ್ಧಾರ್ಥಕ ರೂಪ

   (ಎ) ಗಮನ (ಬಿ) ನಿರ್ಗಮನ

   (ಸಿ) ಅನುಗಮನ (ಡಿ) ನಿಗಮನ

3. 'ನವೋದಯ' ಪದವು ಈ ಸಂಧಿಗೆ ಉದಾಹರಣೆಯಾಗಿದೆ

   (ಎ) ಲೋಪ ಸಂಧಿ (ಬಿ) ಆಗಮ ಸಂಧಿ

   (ಸಿ) ಗುಣ ಸಂಧಿ (ಡಿ) ಯಣ್ ಸಂಧಿ

4. 'ಪ್ರಸಾದ' ಪದದ ತದ್ಭವ ರೂಪ

   (ಎ) ವಿಷಾದ (ಬಿ) ಪಸಾದ

   (ಸಿ) ನಿಶಾದ (ಡಿ) ಹಸಾದ

5. 'ಇತಿಹಾಸಕಾರ' ಪದದ ಅನ್ಯಲಿಂಗರೂಪ

   (ಎ) ಇತಿಹಾಸಿ (ಬಿ) ಐತಿಹಾಸಿಕ

   (ಸಿ) ಇತಿಹಾಸಗಾರ್ತಿ (ಡಿ) ಇತಿಹಾಸದ

6. 'ಭಾರತದಲ್ಲಿ' ಪದವು ಈ ವಿಭಕ್ತಿಗೆ ಉದಾಹರಣೆ

   (ಎ) ಪ್ರಥಮಾ (ಬಿ) ದ್ವಿತೀಯಾ

   (ಸಿ) ಚತುರ್ಥೀ (ಡಿ) ಸಪ್ತಮೀ

7. ಈ ಪದವು 'ಅನ್ಯದೇಶ್ಯ' ಪದಕ್ಕೆ ಉದಾಹರಣೆ

   (ಎ) ಫೋನು (ಬಿ) ಮನೆ

   (ಸಿ) ಕಾನನ (ಡಿ) ಸಾಮಾನು

8. ಇವುಗಳಲ್ಲಿ 'ರೂಢನಾಮ'ಕ್ಕೆ ಉದಾಹರಣೆಯಾದ ಪದ

(ಎ) ಕಾವೇರಿ (ಬಿ) ನದಿ

(ಸಿ) ವೈದ್ಯ (ಡಿ) ಗಂಗಾ

9. ಆರು ಸಾಲಿನ ಪದ್ಯಗಳಿಗೆ ಹೀಗೆಂದು ಕರೆಯುತ್ತಾರೆ

(ಎ) ಷಟ್ಪದಿ (ಬಿ) ಚೌಪದಿ

(ಸಿ) ತ್ರಿಪದಿ (ಡಿ) ಸಪ್ತಪದಿ

10. ಬರಲಿಲ್ಲವೇ ನಿನ್ನ ತಾಯಿ ? – ಈ ವಾಕ್ಯದಲ್ಲಿ ಬಳಸಲಾಗಿರುವ ಲೇಖನ ಚಿಹ್ನೆ

(ಎ) ಆಶ್ಚರ್ಯ ಸೂಚಕ (ಬಿ) ಪ್ರಶ್ನಾರ್ಥಕ

(ಸಿ) ವಿವರಣಾತ್ಮಕ (ಡಿ) ಉದ್ಧರಣ

11. 'ನಗುವಿನ ಪರದೆ' ಇಲ್ಲಿರುವ ಅಲಂಕಾರ

(ಎ) ಉಪಮಾ (ಬಿ) ರೂಪಕ

(ಸಿ) ಉತ್ಪ್ರೇಕ್ಷೆ (ಡಿ) ಅರ್ಥಾಂತರ ನ್ಯಾಸ

12. 'ಕೆಂದಾವರೆ' ಪದವು ಈ ಸಮಾಸಕ್ಕೆ ಉದಾಹರಣೆ

(ಎ) ತತ್ಪುರುಷ (ಬಿ) ದ್ವಿಗು

(ಸಿ) ಕ್ರಿಯಾ (ಡಿ) ಕರ್ಮಧಾರಯ

13. 'ವಿದ್ಯಾರ್ಥಿಗಳು ಶಾಲೆಗೆ ಬಂದರು' – ಈ ವಾಕ್ಯವಿರುವ ಕಾಲ

(ಎ) ಅಕಾಲ (ಬಿ) ವರ್ತಮಾನಕಾಲ

(ಸಿ) ಭವಿಷ್ಯತ್‌ಕಾಲ (ಡಿ) ಭೂತಕಾಲ

14. 'ರಾಣಿ' ಪದದ ಬಹುವಚನ ರೂಪ

(ಎ) ರಾಣಿಯರು (ಬಿ) ರಾಣಿಗಳು

(ಸಿ) ರಮಣಿ (ಡಿ) ರಾಗಿಣಿ

15. ಅಧಿಕಾರಿಗಳಿಗೆ ಪತ್ರ ಬರೆಯುವಾಗ ಬಳಸುವ ಸಂಬೋಧನೆ

(ಎ) ತೀರ್ಥರೂಪ (ಬಿ) ಚಿರಂಜೀವಿ

(ಸಿ) ಮಾನ್ಯರೇ (ಡಿ) ಪ್ರೀತಿಯ

16. ಈ ಕೆಳಗಿನ ***'ಅ' ಪಟ್ಟಿ***ಯಲ್ಲಿರುವ ವ್ಯಾಕರಣಾಂಶಗಳಿಗೆ ಸರಿಹೊಂದುವ ಉದಾಹರಣೆಗಳನ್ನು ***'ಬ' ಪಟ್ಟಿ***ಯಿಂದ ಆರಿಸಿ, ಕ್ರಮಾಕ್ಷರದೊಂದಿಗೆ ಉತ್ತರಕ್ಕೆ ಮೀಸಲಿಟ್ಟ ಜಾಗದಲ್ಲಿಯೇ ಬರೆಯಿರಿ : $5 \times 1 = 5$

| ***'ಅ' ಪಟ್ಟಿ*** | ***'ಬ' ಪಟ್ಟಿ*** |
|---|---|
| i) ದ್ವಿರುಕ್ತಿ | ಅ) ನಮ್ಮ |
| ii) ಸರ್ವನಾಮ | ಆ) ಬರೆದನು |
| iii) ಅನುಕರಣಾವ್ಯಯ | ಇ) ನೋಡು |
| iv) ಧಾತು | ಈ) ದನಕರು |
| v) ಜೋಡುನುಡಿ | ಉ) ಕಟ್ಟಕಡೆ |
| | ಊ) ಹಿಮಾಲಯ |
| | ಋ) ಪಟಪಟನೆ |
| | ಎ) ಮಳೆಗಾಲ |

ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿ ಬರೆಯಿರಿ: $5 \times 1 = 5$

17. ದೇವತೆ ಭರತಕುಮಾರನಿಗೆ .............................. ಕೊಟ್ಟಿತು.

18. ಬಿ.ವಿ. ಕಾರಂತರು ಹಿಂದಿಯಲ್ಲಿ ಪದವಿ ಪಡೆದ ವಿಶ್ವವಿದ್ಯಾಲಯದ ಹೆಸರು ..................... .

19. ಕಣಿಯರ ಮೊದಲ ಸಮ್ಮೇಳನ ..............................ದಲ್ಲಿ ನಡೆಯಿತು.

20. ಸಹ್ಯಾದ್ರಿಯ ಮಹಾಕವಿ ..............................ರವರು.

21. ಭೂಮಿಯು ..............................ನಿಂದ ಸಿಡಿದು ಬಂತು.

ಈ ಕೆಳಗಿನ ಪ್ರತಿ ಪ್ರಶ್ನೆಗಳಿಗೂ ***ಒಂದೊಂದು*** ವಾಕ್ಯದಲ್ಲಿ ಉತ್ತರ ಬರೆಯಿರಿ : $8 \times 1 = 8$

22. ಭಾರತೀಯರು ಯಾವ ಬಣ್ಣದವರು ?

23. ಕೃಷ್ಣದೇವರಾಯನೊಡನೆ ಪಗಡೆಯಾಟ ಆಡುತ್ತಿದ್ದವನು ಯಾರು ?

24. ಕೇದಾರನಾಥ ದೇವಾಲಯ ಯಾವ ಪರ್ವತದ ಮಡಿಲಿನಲ್ಲಿ ಇದೆ ?

25. 'ಕೃಷ್ಣಲೀಲಾ' ನಾಟಕವನ್ನು ನೋಡಲು ಕಾರಂತರು ಹೋದ ಬಗೆ ಹೇಗೆ ?

26. ಭಾಗ್ಯದ ಬಳೆಗಾರ ಪದ್ಯದಲ್ಲಿ ಪಡೆದವ್ವನ ಆಸೆ ಏನು ?

27. ಧ್ಯಾನವೆಂಬ ಊರುಗೋಲು ಏಕೆ ಬೇಕು ?

28. ಹಡಗು ಯಾರ ಕೌಶಲ್ಯಕ್ಕೆ ಕಳಸವಿಟ್ಟಿದೆ ?

29. ಸಾಲಿನಲ್ಲಿ ನಿಂತಿದ್ದ ಹಿರಿಯರು ಕವಿ ಮೊಗಸಾಲೆಯವರನ್ನು ಎಲ್ಲಿಗೆ ಆಹ್ವಾನಿಸಿದರು ?

ಈ ಕೆಳಗಿನ ಪ್ರಶ್ನೆಗಳಿಗೆ **ಮೂರು–ನಾಲ್ಕು** ವಾಕ್ಯಗಳಲ್ಲಿ ಉತ್ತರ ಬರೆಯಿರಿ : $12 \times 2 = 24$

30. ಭರತಕುಮಾರನ ಕನಸಿನಲ್ಲಿ ತಾಯಿ ಬಂದು ಏನೆಂದು ಹೇಳಿದಳು ?

31. ಪೂರ್ಣಿಮಾಳ ಗಂಡನ ಬೆನ್ನು ನೀಲಿಗಟ್ಟಿದ್ದು ಏಕೆ ?

32. ಬಾಲ್ಯದಲ್ಲಿ ಕಾರಂತರಿಗೆ ಸಿಕ್ಕ ಕಲಾಶ್ರೀಮಂತಿಕೆ ಯಾವ ಯಾವ ಬಗೆಯವು ?

33. ತಗಡೂರು ರಾಮಚಂದ್ರರಾಯರು ಜನರ ಮನಸ್ಸನ್ನು ತಿರುಗಿಸಲು ಏನು ಮಾಡುತ್ತಿದ್ದರು ?

34. ಲೇಖಕರು ತಿಳಿಸುವಂತೆ ಮಳೆಕೊಯ್ಲಿನ ಕ್ರಮಗಳಾವುವು ?

35. ಮಳೆನೀರು ಭೂಮಿಯೊಳಕ್ಕೆ ಇಳಿಯುವುದು ಕಡಿಮೆಯಾಗುತ್ತಿದೆ ಏಕೆ ?

36. ಯಾವ ದಾರಿಯಲ್ಲಿ ಹೋಗುವಂತೆ ಬಾಲೆ ಬಳೆಗಾರನಿಗೆ ಹೇಳಿದಳು ?

37. ವಚನಕಾರರ ಪ್ರಕಾರ ದನದ ಸ್ವರೂಪ ಹೇಗಿದೆ ಎಂಬುದನ್ನು ತಿಳಿಸಿ.

38. ಹಡಗನ್ನು ಸಂಕ್ಷಿಪ್ತ ಬ್ರಹ್ಮಾಂಡವೆಂದು ಏಕೆ ಕರೆಯಲಾಗಿದೆ ?

39. ಕವಿ ಹಡಗನ್ನು ನವಖಂಡ ಎಂದು ಕರೆಯಲು ಕಾರಣವೇನು ?

40. ದರ್ಶನ ಪದ್ಯದಲ್ಲಿನ ಕವಿ ಪುತ್ರನು ಭಾರತಕ್ಕೆ ಹಿಂದಿರುಗಲು ತೀರ್ಮಾನಿಸಿದ್ದು ಏಕೆ ?

41. ದಾಸರು ಮನುಷ್ಯರಿಗೆ ಏನೆಂದು ಎಚ್ಚರಿಕೆ ನೀಡುತ್ತಾರೆ ?

42. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ : 1 × 2 = 2

ಸುಳಿಮಿಂಚಿನ ಸೆಳೆ ಮುಂಗಾರಿನ ಮಳೆ

ಕವಿವರ ರತ್ನಾಕರನ ಕೆರೆ.

***ಅಥವಾ***

ಪಂಪ ಮಹಾಚಲ ಜೋಡಿ ಶಿಖರಗಳು

ಧುಮ್ಮಿಕ್ಕುವ ಹರಿಹರನ ಝರಿ.

ಈ ಕೆಳಗಿನ ಸಾಹಿತಿ, ಕವಿಗಳ ಕಾಲ, ಸ್ಥಳ ಮತ್ತು ಕೃತಿಯನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : 2 × 2 = 4

43. ಯಮುನಾಮೂರ್ತಿ

44. ಪುರಂದರದಾಸರು

ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ–ಸ್ವಾರಸ್ಯವನ್ನು ಬರೆಯಿರಿ : 4 × 3 = 12

45. 'ನಿಮ್ಮ ಕೈಹಿಡಿದ ಮೇಲೆ ಇನ್ನೂ ಏನೇನು ಮಾಡಬೇಕೊ' ?

46. "ಎಂತಹ ಅದ್ಭುತ ಕಲಾಕಾರನಪ್ಪ ಈ ಪ್ರಕೃತಿ!"

47. "ವಿಮಲ ಧರ್ಮದ ವಾಣಿ ಜನತೆಯಂತಃಸಾಕ್ಷಿ"

48. "ತುಂಬಲಿಲ್ಲವೆ ಬಡವರ ಬಸಿರು"

49. ಈ ಕೆಳಗಿನವುಗಳಲಿ ಯಾವುದಾದರೂ ***ಒಂದು*** ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ : 1 × 3 = 3

— ಕೈಕೆಸರಾದರೆ ಬಾಯಿ ಮೊಸರು

— ಮನಸ್ಸಿದ್ದರೆ ಮಾರ್ಗ

— ಬೆಳ್ಳಗಿರುವುದೆಲ್ಲ ಹಾಲಲ್ಲ

ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ***ಎರಡು*** ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $2 \times 4 = 8$

— ಲೇಖಕರು ವರ್ಣಿಸಿರುವಂತೆ ಲಾಲ್‌ಬಾಗಿನ ಚೆಲುವನ್ನು ವಿವರಿಸಿ.

— 'ಮಗುವಿನ ಕರೆ' ತಾಯಿಯಲ್ಲಿ ಜೀವನ ಪ್ರೀತಿಯನ್ನು ಹೇಗೆ ಮೂಡಿಸಿತು ?

— ಗುಬ್ಬಿ ಕಂಪನಿಯಲ್ಲಿ ಕಾರಂತರು ಹೇಗೆ ಅಭಿವೃದ್ಧಿ ಹೊಂದಿದರು ?

50.

51.

52. ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ***ಒಂದು*** ಪ್ರಶ್ನೆಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $1 \times 4 = 4$

— ಭರತೇಶನು ಸಭೆಯಲ್ಲಿ ಶೀವಿಯಿಂದ ಮೆರೆದ ಪರಿಯನ್ನು ವರ್ಣಿಸಿರಿ.

— ದೇಹವನ್ನು 'ಅಚ್ಚು ಮುರಿದ ಹಾಳು ಬಂಡಿ' ಎಂದು ಕರೆಯಲು ಕಾರಣವೇನು ಎಂದು ವಿವರಿಸಿ.

53. ನಿಮ್ಮನ್ನು ಮೈಸೂರಿನ ದಿವಾನ್ಸ್ ರಸ್ತೆಯಲ್ಲಿರುವ ಸರ್ಕಾರಿ ಪ್ರೌಢಶಾಲೆಯಲ್ಲಿ ಹತ್ತನೇ ತರಗತಿ ಓದುತ್ತಿರುವ 'ವಸಂತ' ಎಂದು ಭಾವಿಸಿಕೊಂಡು, ಸೂಕ್ತವಾದ ಕಾರಣ ನೀಡಿ ಮೂರು ದಿನಗಳ ರಜಾಕೊಡುವಂತೆ ಕೋರಿ ಮುಖ್ಯೋಪಾಧ್ಯಾಯರಿಗೆ ಒಂದು ಪತ್ರ ಬರೆಯಿರಿ. $1 \times 5 = 5$

***ಅಥವಾ***

ನಿಮ್ಮನ್ನು ಕೊಡಗು ಜಿಲ್ಲೆಯ ಶಿರಂಗಾಲದಲ್ಲಿರುವ 'ಚೇತನ' ಎಂದು ಭಾವಿಸಿಕೊಂಡು, ಸೋಮವಾರಪೇಟೆಯ ರಥದ ಬೀದಿಯಲ್ಲಿರುವ ನಿಮ್ಮ ಗೆಳೆಯ 'ಪುನಶ್ಚೇತ್'ಗೆ ಹಬ್ಬಕ್ಕೆ ಬರುವಂತೆ ಒಂದು ಪತ್ರ ಬರೆಯಿರಿ.

54. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ***ಒಂದನ್ನು*** ಕುರಿತು ಹದಿನೈದು ವಾಕ್ಯಗಳಿಗೆ ಮೀರದಂತೆ ಒಂದು ಪ್ರಬಂಧ ಬರೆಯಿರಿ : $1 \times 5 = 5$

— ಗ್ರಂಥಾಲಯ

— ವೃತ್ತಪತ್ರಿಕೆಗಳು

— ಕ್ರೀಡೆಗಳು